# ಭಾಗ್ಯದ ಲಕ್ಷ್ಮೀ ಬಾರಮ್ಮ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru, page No. 53.
2. **Ref.:** This is from the book: Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 18.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, , page No. 419.
4. **Note:** Lyrics given without highlights are as per Ref. 2. The lyrics in Ref. 3 are similar to Ref. 2. The wordings in Ref. 1 are are almost similar to Ref. 2 except few differences, which are given in yellow highlights.
5. Note: Singer has followed lyrics as in Ref. 2.
6. **Note:** Pravachana Part-1 is uploaded in this website. Part-2 & Part-3 available which cannot be uploaded here. The music devotees can visit these links for further parts of pravachanas on this song. Hence, those links are given below:
   **Part 2:**
   https://www.youtube.com/watch?v=zQ6VhRdWqUU&list=PLYsZW5booxYdjFPVUs6yMJDDCDolp9B7q&index=9
   **Part 3:**
   https://www.youtube.com/watch?v=9ChCxcdMzYs&list=PLYsZW5booxYdjFPVUs6yMJDDCDolp9B7q&index=8

ರಾಗ: ಮಧ್ಯಮಾವತಿ ತಾಳ: ಆದಿ

ಭಾಗ್ಯದ ಲಕ್ಷ್ಮೀ ಬಾರಮ್ಮ
ನಮ್ಮಮ್ಮ ನೀ ಸೌಭಾಗ್ಯದ ಲಕ್ಷ್ಮೀ ಬಾರಮ್ಮ || ಪ ||

ಹೆಜ್ಜೆಯ ಮೇಲೆ ಹೆಜ್ಜೆಯನಿಕ್ಕುತ
ಗೆಜ್ಜೆ ಕಾಲ್ಗಳ ಧ್ವನಿಯ ಮಾಡುತ (ಗೆಜ್ಜೆಯ ಕಾಲಿನ ಧ್ವನಿಯ ಮಾಡುತ)
ಸಜ್ಜನ ಸಾಧು ಪೂಜೆಯ ವೇಳೆಗೆ
ಮಜ್ಜಿಗೆಯೊಳಗಿನ ಬೆಣ್ಣೆಯಂತೆ || ೧ ||

ಕನಕ ವೃಷ್ಟಿಯ ಕರೆಯುತ ಬಾರೆ
ಮನ ಕಾಮನೆಯ ಸಿದ್ಧಿಯ ತೋರೆ (ಮನಕೆ ಮತಿಯ ಸಿದ್ಧಿಯ ತೋರೆ)
ದಿನಕರ ಕೋಟಿ ತೇಜದಿ ಹೊಳೆವ (ದಿನಕರ ಕೋಟಿ ತೇಜದಿ ಹೊಳೆಯುತ)
ಜನಕ ರಾಯನ ಕುಮಾರಿ ಬೇಗ || ೨ || (ಜನಕ ರಾಯನ ಕುಮಾರಿ ಸೀತೆ)

ಅತ್ತಿತ್ತಗಲದೆ ಭಕ್ತರ ಮನೆಯಲಿ
ನಿತ್ಯ ಸುಮಂಗಳ ನಿತ್ಯ ಮಹೋತ್ಸವ (ನಿತ್ಯ ಮಂಗಲವು ನಿತ್ಯ ಮಹೋತ್ಸವ)
ಸತ್ಯವ ತೋರುವ ಸಾಧು ಸಜ್ಜನರ (ಸತ್ಯವ ತೋರುವ ಸಜ್ಜನರಿಗೆ ನೀ)
ಚಿತ್ತದಿ ಹೊಳೆಯುವ ಪುತ್ಥಳಿ ಬೊಂಬೆ || ೩ ||

ಸಂಖ್ಯೆಯಿಲ್ಲದ ಭಾಗ್ಯವ ಕೊಟ್ಟು
ಕಂಕಣ ಕೈಯ ತಿರುವುತ ಬಾರೆ
ಕುಂಕುಮಾಂಕಿತೆ ಪಂಕಜಲೋಚನೆ
ವೆಂಕಟ ರಮಣನ ಬಿಂಕದ ರಾಣಿ || ೪ || (ವೆಂಕಟ ರಾಯನ ಮೋಹದ ರಾಣೀ)

ಸಕ್ಕರೆ ತುಪ್ಪದ ಕಾಲುವೆ ಹರಿಸಿ
ಶುಕ್ರವಾರದ ಪೂಜೆಯ ವೇಳೆಗೆ (ಶುಕ್ರವಾರದ ಪೂಜೆಯ ಕೊಂಬೆ)
ಅಕ್ಕರೆಯುಳ್ಳ ಅಳಗಿರಿ ರಂಗನ
ಚೊಕ್ಕ ಪುರಂದರ ವಿಠ್ಠಲನ ರಾಣಿ || ೫ || (ಶಕ್ತ ಪುರಂದರ ವಿಠ್ಠಲನ ರಾಣಿ)

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಲಕ್ಷ್ಮೀ ದೇವಿಯು** ಚಿತ್ತದಲಿ ಆನಂದ ಹಾಗು ಸುಖಗಳನ್ನು ದಯಪಾಲಿಸುವವಳು.

**ಸಜ್ಜನ** = ಸುಜನರು

**ಸಾಧು** = ವಿದ್ಯುಕ್ತವಾದ, ಒಳ್ಳೆಯ

**ಮತಿಯ ಸಿದ್ದಿ** = ಬುದ್ದಿಯ ಪರಿಪಕ್ವತೆ

**ಸತ್ಯವ ತೋರುವ** = ಸತ್ಯವನ್ನು ಅನ್ಯರಿಗೆ ತಿಳಿಸಿಕೊಡುವವ - ಜ್ಞಾನಿ

**ಕನಕ ವೃಷ್ಟಿಯ** – ಬಂಗಾರದ ಸುರಿಮಳೆಯನ್ನು, ಎಂದರೆ ಐಶ್ವರ್ಯವನ್ನು.

**ಮನಕೆ ಮಾನವ ಸಿದ್ಧಿಯ** – ಮನಸ್ಸಿಗೆ ಸಮಾಧಾನವನ್ನೂ (ಮಾನ), ಬಯಕೆಗಳ ಪೂರೈಕೆಯನ್ನೂ (ಸಿದ್ಧಿ).

**ದಿನಕರ ಕೋಟಿ ತೇಜದಿ** – ಕೋಟಿ ಸೂರ್ಯರ ಪ್ರಕಾಶದಿಂದ.

**ಜನಕರಾಯನ ಕುಮಾರಿ** – ಸೀತೆಯು ಲಕ್ಷ್ಮಿಯ ಅವತಾರವೇ.

**ಸತ್ಯವ ತೋರುತ** – ಹರಿಯು ಸರ್ವೋತ್ತಮನೆಂಬ ಸತ್ಯವನ್ನು ತಿಳಿಸುತ್ತ.

**ಅಕ್ಕರೆಯುಳ್ಳ** – ತನ್ನಲ್ಲಿ ಅತಿಶಯವಾದ ಪ್ರೀತಿಯಿರುವ.

**ಅಳಗಿರಿರಂಗನ – ಅಳಗಿರಿಯೆಂಬುದು ಆಂಧ್ರಪ್ರದೇಶದ ಕಡಪಾ ಬಳಿಯಿರುವ 'ಪುಷ್ಪಗಿರಿ'ಯೆಂಬ ಕ್ಷೇತ್ರವೆಂದು ಹೇಳುತ್ತಾರೆ; ಆದರೆ ತಿರುಮಲೆ – ತಿರುಪತಿಗೂ ಅಳಗಿರಿಯೆಂಬ ಹೆಸರಿದೆ.** ಕಡಪ ಹತ್ತಿರ ಪೆನ್ನಾರ್ ನದಿಯ ಮೇಲೆ ಕ್ಷೇತ್ರವಿದೆ. ಇದಕ್ಕೆ ತಿರುಮಲ - ಮಧ್ಯ ಅಹೋಬಲಂ ಎಂತಲೂ ಹೇಳುತ್ತಾರೆ.

**ಶಕ್ತ** = ಸರ್ವೋತ್ತಮ

**Classification:** Keerthane
**Ankita:** purandara vittala
**Location:** NA
**Category:** Lakshmi Stuti
**Group Words:** srinivasa, Lakshmi, padma, bangara, puje, sita, satya, siddi, sadhu, Bhagya, gejje, benne, mangala, kai, ranga,
**Pravachana:** Vid. Anantha Krishna Acharya
**Explanation:** NA